ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 3 ಚಾ ಸಾ 3

ಹೆಸರುಃ ಗಣೇಶ್

ತಂದೆಯ ಹೆಸರುಃ ಚುನೀಲಾಲ್

ವಯಸ್ಸುಃ 48 ವರ್ಷ

ಉದ್ಯೋಗಃ ವ್ಯಾಪಾರ

ವಾಸಃ ಕೆ.ಆರ್.ಸಾಗರ.

ದಿಃ 23.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನನ್ನ ತಂದೆ ತಾಯಿಗೆ ನಾವು ಆರು ಜನ ಮಕ್ಕಳು. ಅವರೆಂದರೆ ನಾನು, ರಾಜುಬಾಯಿ, ಹರಿಲಾಲ್, ಸೀತಾಬಾಯಿ, ದಲ್ಲುಬಾಯಿ ಮತ್ತು ಗಂಗಾರಾಮ್.

2. ನನಗೆ ನಾಲ್ಕು ಜನ ಮಕ್ಕಳು. ಅವರೆಂದರೆ ಹೀನಾ, ಕೃಷ್ಣ ಗೋವಿಂದ ಮತ್ತು ಲಕನ್.

3. ನಾನು ಮತ್ತು ನನ್ನ ಸಹೋದರರು ಎಲ್ಲರೂ ಪಾ್ಲಟಿಕ್ ಹೂವಿನ ವ್ಯಪಾರ, ಬಟ್ಟೆ ವ್ಯಾಪಾರ ಮತ್ತು ಗಾಜಿನ ಅಲಂಕಾರಿಕ ವಸ್ತುಗಳ ವ್ಯಾಪಾರವನ್ನು ಮಾಡುತ್ತೇವೆ.

4. ನಾವು ಆ ರೀತಿ ವ್ಯಾಪಾರವನ್ನು ಕರ್ನಾಟಕ, ಆಂದ್ರಪ್ರದೇಶ ಮತ್ತು ತಮಿಳುನಾಡು ಮುಂತಾದ ರಾಜ್ಯಗಳಲ್ಲೂ ಕೂಡ ಮಾಡುತ್ತೇವೆ.

5. ಆ ರೀತಿ ವ್ಯಾಪಾರಕ್ಕೆಂದು ನಾವು ಹೋದರೆ ಕೆಲವೊಂದು ಸಲ ಒಂದು ತಿಂಗಳಿಗೆ ಒಂದು ಸಲ ಮತ್ತು ಕೆಲವೊಮ್ಮೆ ಒಂದೂವರೆ ತಿಂಗಳಿಗೆ ಒಂದು ಸಲ ಮನೆಗೆ ಬರುತ್ತಿದ್ದೆವು.

6. ನನ್ನ ಮಗಳು ಹೀನಾಳನ್ನು ಮದುವೆ ಮಾಡಿಕೊಟ್ಟಿದ್ದು ಆಕೆ ತನ್ನ ಗಂಡನ ಮನೆ ಹುಂಡವಾಡಿಯಲ್ಲಿ ವಾಸವಿದ್ದಾರೆ.

7. ಆ ಸಮಯದಲ್ಲಿ ನಾನು, ನನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳು ಆಂದ್ರಪ್ರದೇಶದ ಮೆಹಬೂಬ್ ನಗರದಲ್ಲಿ ವ್ಯಾಪಾರ ಮಾಡಿಕೊಂಡು ಇದ್ದೆವು. ನನ್ನ ಇನ್ನೊಬ್ಬ ಮಗ ಗೋವಿಂದ ವಿದ್ಯಾಭ್ಯಾಸಕ್ಕಾಗಿ ನನ್ನ ತಮ್ಮನ ಹೆಂಡತಿ ಲಕ್ಷ್ಮಿಯ ಮನೆಯಲ್ಲಿ ಇದ್ದ.

8. ಗಂಗಾರಾಮ್ ವ್ಯಾಪಾರಕ್ಕೆಂದು ಹೊರಗೆ ಹೋದಾಗ ಆತನ ಮನೆಯಲ್ಲಿ ಆತನ ಹೆಂಡತಿ, ಮೂರು ಜನ ಮಕ್ಕಳು ಮತ್ತು ನನ್ನ ಮಗ ಗೋವಿಂದ ಇರುತ್ತಿದ್ದರು.

9. ಬೆಳಿಗ್ಗೆ 6 – 7 ಗಂಟೆಗೆ ಚಾ ಸಾ 1 ಲಕ್ಷ್ಮಿ ಫೋನ್ ಮಾಡಿ ಲಕ್ಷ್ಮಿ, ಆಕೆಯ ಮೂರು ಜನ ಮಕ್ಕಳಾದ ರಾಜ್, ಕೋಮಲ್ ಮತ್ತು ಕುನಾಲ್ ಮತ್ತು ನನ್ನ ಮಗ ಗೋವಿಂದನಿಗೆ ಯಾರೋ ಹೊಡೆದಿದ್ದಾರೆ, ಅವರು ಐದು ಜನರು ಸತ್ತು ಹೋಗಿದ್ದಾರೆ ಎಂದು ನನಗೆ ತಿಳಿಸಿದರು.

10. ವಿಚಾರ ತಿಳಿದ ತಕ್ಷಣ ನಾನು, ನನ್ನ ಹೆಂಡತಿ, ಇಬ್ಬರು ಮಕ್ಕಳು, ಮೃತ ಲಕ್ಷ್ಮಿಯ ತಾಯಿ ಮತ್ತು ಆಕೆಯ ತಮ್ಮಂದಿರು ಕಾರು ಮಾಡಿಕೊಂಡು ರಾತ್ರಿ 12 – 12-30 ಗಂಟೆಗೆ ಕೆ.ಆರ್. ಸಾಗರದಲ್ಲಿರುವ ನಮ್ಮ ಮನೆಗೆ ಬಂದೆವು.

11. ನಾವು ಮನೆಯ ಹೊರಗೆ ಮಲಗಿಸಿದ್ದ ಐದು ಹೆಣಗಳನ್ನು ನೋಡಿದೆವು.

12. ನಾನು ಲಕ್ಷ್ಮಿಯನ್ನು ವಿಚಾರಿಸಿದಾಗ ಮೃತ ಲಕ್ಷ್ಮಿ ಮತ್ತು ನಾಲ್ಕು ಜನ ಮಕ್ಕಳನ್ನು ಯಾರೋ ಕೊಲೆ ಮಾಡಿದ್ದಾರೆ ಕೊಲೆ ಮಾಡಿದವರು ಯಾರು ಎಂದು ಗೊತ್ತಿಲ್ಲ ಎಂದು ತಿಳಿಸಿದರು.

13. ಈ ಪ್ರಕರಣದ ಆರೋಪಿ ಲಕ್ಷ್ಮಿಯನ್ನು ನಾನು ನನ್ನ ತಮ್ಮ ಗಂಗಾರಾಮ್ ನ ಮದುವೆಯ ಸಂದರ್ಭದಲ್ಲಿ ನೋಡಿದ್ದೇನೆ.

14. ಸದರಿ ಗಂಗಾರಾಮ್ ಆರೋಪಿ ಲಕ್ಷ್ಮಿಯ Lover ಎಂದು ಗೊತ್ತಾಯಿತು.

15. ಆನಂತರ ಆರೋಪಿ ಲಕ್ಷ್ಮಿಯನ್ನು ಪೊಲೀಸರು ಕರೆದುಕೊಂಡು ಹೋಗಿದ್ದಾರೆ.

16. ಗಂಗಾರಾಮ್ ತನಗೆ ಬೇಕು ಎಂಬ ಕಾರಣಕ್ಕಾಗಿ ಆರೋಪಿ ಲಕ್ಷ್ಮಿ ಗಂಗಾರಾಮ್ ನ ಹೆಂಡತಿ ಲಕ್ಷ್ಮಿ, ಆಕೆಯ ಮೂರು ಜನ ಮಕ್ಕಳು ಮತ್ತು ನನ್ನ ಮಗ ಗೋವಿಂದನನ್ನು ಕೊಲೆ ಮಾಡಿದ್ದಾಳೆ ಎಂಬ ವಿಚಾರ ಪೊಲೀಸರಿಂದ ಗೊತ್ತಾಯಿತು.

17. ಆ ರೀತಿ ಲಕ್ಷ್ಮಿ ಸದರಿ ಐದು ಜನರನ್ನು ತಲೆ, ಕತ್ತು ಮತ್ತು ಬಾಯಿಗೆ ಮಚ್ಚು ಮತ್ತು ಸುತ್ತಿಗೆಯಿಂದ ಹೊಡೆದು ಕೊಲೆ ಮಾಡಿದ್ದಾಳೆ ಎಂಬ ವಿಚಾರ ಪೊಲೀಸರಿಂದ ಗೊತ್ತಾಯಿತು.

18. ಲಕ್ಷ್ಮಿಯನ್ನು ಕೊಲೆ ಮಾಡಿದ ನಂತರ ಮಕ್ಕಳು ಎದ್ದು ಬಿಟ್ಟರು ಎಂದು ಹೇಳಿ ಆರೋಪಿ ಸದರಿ ನಾಲ್ಕು ಜನ ಮಕ್ಕಳನ್ನೂ ಕೂಡ ಕೊಲೆ ಮಾಡಿದ್ದಾಳೆ.

**ಆರೋಪಿಯ ಪರವಾಗಿ ಶ್ರೀ ಎಸ್ ಆರ್ ಎಸ್ ವಕೀಲರಿಂದ ಕಲಂ 231(2) ರನ್ವಯ ಸಲ್ಲಿಸಲಾದ ಅರ್ಜಿಯಲ್ಲಿ ಮಾಡಿದ ಆದೇಶಕ್ಕನುಗುಣವಾಗಿ ಮುಂದೂಡಿದೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)